KACB500015202022

Presented on : 09-09-2022
Registered on : 09-09-2022
Decided on : 01-06-2024

ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ
ನ್ಯಾಯಾಲಯ, ಗುಡಿಬಂಡೆ

ಉಪಸ್ಥಿತರು

**ಶ್ರೀ ಹರೀಶ. ಕೆ. ಎಂ., ಬಿ.ಎ., ಎಲ್.ಎಲ್.ಬಿ.,**
ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ಗುಡಿಬಂಡೆ

ದಿನಾಂಕ **01** ನೇ ಜೂನ್ ಮಾಹೆ **2024**

ಸಿ.ಸಿ. ನಂ.**337/2022**

ಪಿರ್ಯಾದುದಾರರುಃ ಗುಡಿಬಂಡೆ ಪೋಲೀಸರು
(ಸರ್ಕಾರದ ಪರ ಸಹಾಯಕ ಸರ್ಕಾರಿ ಅಭಿಯೋಜಕರು)

ವಿರುದ್ಧ

ಆರೋಪಿ ಚೆನ್ನಕೇಶವ ಬಿನ್ ಲೇಟ್ ಕದ್ರಿ ನರಸಿಂಹಪ್ಪ
28 ವರ್ಷ, ವಾಸಃ ಚೆಂಡೂರು ಗ್ರಾಮ
ಗುಡಿಬಂಡೆ ತಾಲ್ಲೂಕು

(ಶ್ರೀ ಎ.ಜಿ.ವಕೀಲರ ಮೂಲಕ)

| | |
|---|---|
| ಪಿರ್ಯಾದುದಾರರ ಹೆಸರು | ಶ್ರೀ ವೆಂಕಟರವಣಪ್ಪ ಬಿನ್ ಲೇಟ್ ಬೈರಪ್ಪ |
| ಆರೋಪಿಸಲ್ಪಟ್ಟ ಆಪಾದನೆ | ಭಾರತೀಯ ದಂಡ ಸಂಹಿತೆ ಕಲಂ 324 |
| ಆರೋಪ ದಾಖಲಾದ ದಿನಾಂಕ | 11-06-2022 |
| ಸಾಕ್ಷ್ಯ ಪ್ರಾರಂಭವಾದ ದಿನಾಂಕ | 21-05-2024 |
| ಸಾಕ್ಷ್ಯ ಮುಕ್ತಾಯವಾದ ದಿನಾಂಕ | 21-05-2024 |

| | |
|---|---|
| ತೀರ್ಪು ಪ್ರಕಟಿಸಿದ ದಿನಾಂಕ | 01-06-2024 |
| ನ್ಯಾಯಾಧೀಶರ ನಿರ್ಣಯ | ಆರೋಪಿಯನ್ನು ಬಿಡುಗಡೆ ಮಾಡಿರುತ್ತಾರೆ |

## ತೀರ್ಪು

ಗುಡಿಬಂಡೆ ಪೋಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಆರೋಪಿತನ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 324 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ.

**2**. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ,

ದಿನಾಂಕ 11-6-2022 ರಂದು ಸಂಜೆ 5 ಗಂಟೆ ಸಮಯದಲ್ಲಿ ಗುಡಿಬಂಡೆ ತಾಲ್ಲೂಕು ಬೀಚಗಾನಹಳ್ಳಿ ಗ್ರಾಮದ ಚಾಸಾ 1 ರವರ ಬಾಬತ್ತು ಟೊಮ್ಯಾಟೋ ತೋಟದಲ್ಲಿ ಆರೋಪಿ ಚಾಸಾ 1 ರವರನ್ನು ಕೂಲಿ ಹಣವನ್ನು ಕೇಳಿದ್ದು, ಚಾಸಾ 1 ರವರು ಐದು ನಿಮಿಷ ಕೊಡುತ್ತೇನೆಂದು ಹೇಳಿದ್ದಕ್ಕೆ ಆರೋಪಿ ಕಬ್ಬಿಣದ ಪೈಪಿನಿಂದ ಚಾಸಾ 1 ರವರ ಬೆನ್ನಿಗೆ ಹೊಡೆದು, ಬಿಡಿಸಲು ಅಡ್ಡ ಬಂದ ಚಾಸಾ 2 ರವರಿಗೆ ಕೋಲಿನಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿರುತ್ತಾನೆ ಎಂಬುದಾಗಿರುತ್ತದೆ. ಆ ಕಾರಣ ಮೇಲ್ಕಾಣಿಸಿದ ಪ್ರಕರಣಗಳ ಅಡಿಯಲ್ಲಿ ಆರೋಪಿತರು ಅಪರಾಧವೆಸಗಿದ್ದಾರೆಂದು ಅವರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

3. ಪ್ರಸ್ತುತ ಪ್ರಕರಣದಲ್ಲಿ ತನಿಖಾಧಿಕಾರಿಯು ಆರೋಪಿತನ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು. ನಂತರ ಆರೋಪಿ ವಕೀಲರ ಮೂಲಕ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾನೆ. ಆರೋಪಿಗೆ ಅಭಿಯೋಜನೆಯ ಎಲ್ಲಾ ದಸ್ತಾವೇಜುಗಳನ್ನು ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಅನುಸಾರ ಒದಗಿಸಲಾಗಿರುತ್ತದೆ. ಆರೋಪಿತನ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 324 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ಆರೋಪಣೆಯನ್ನು ರಚಿಸಲಾಯಿತು. ಆರೋಪಿ ಆರೋಪಣೆಯನ್ನು ನಿರಾಕರಿಸಿ ವಿಚಾರಣೆಯನ್ನು ಬಯಸಿರುತ್ತಾನೆ.

4. ಅಭಿಯೋಜನೆಯು ದೋಷಾರೋಪಣಾ ಪಟ್ಟಿಯಲ್ಲಿ ತೋರಿಸಿರುವ 6 ಸಾಕ್ಷಿದಾರರ ಪೈಕಿ ಚಾಸಾ 1 ಮತ್ತು 2 ರವರು ಪ್ರಾಸಾ 1 ಮತ್ತು 2 ರಂತೆ ಸಾಕ್ಷ್ಯ ನುಡಿದಿರುತ್ತಾರೆ. ಚಾಸಾ 1 ಮತ್ತು 2 ನೊಂದ ವ್ಯಕ್ತಿಗಳು ಹಾಗೂ ಪಿರ್ಯಾದುದಾರರಾಗಿ ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿಂದ ಉಳಿದ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸುವುದರಿಂದ ಅಭಿಯೋಜನೆಗೆ ಯಾವುದೇ ರೀತಿಯ ಸಹಾಯವಾಗುವುದಿಲ್ಲವೆಂದು ತಿಳಿದು ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆಯನ್ನು ತಿರಸ್ಕರಿಸಿ ಉಳಿದ ಸಾಕ್ಷಿದಾರರ ವಿಚಾರಣೆಯನ್ನು ಕೈಬಿಡಲಾಗಿರುತ್ತದೆ. ಅಭಿಯೋಜನೆಯು ನಾಲ್ಕು ದಾಖಲೆಗಳನ್ನು ಹಾಜರುಪಡಿಸಿ ನಿಪಿ 1 ರಿಂದ 4 ಎಂದು ಗುರ್ತಿಸಿಕೊಂಡಿರುತ್ತದೆ.

5. ಅಭಿಯೋಜನೆಯು ತನ್ನ ಪರವಾಗಿ ವಿಚಾರಣೆ ಮುಗಿಸಿದ ನಂತರ ಈ ಪ್ರಕರಣದಲ್ಲಿ ಆರೋಪಿತನ ವಿರುದ್ಧ ಸಾಕ್ಷ್ಯವು ಇಲ್ಲದೇ ಇರುವುದರಿಂದ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿತನ ಹೇಳಿಕೆಗಳನ್ನು ಕೈಬಿಡಲಾಗಿರುತ್ತದೆ. ಆರೋಪಿ ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ನ್ನು ಪಾಲನೆ ಮಾಡಿರುತ್ತಾನೆ.

6. ಆರೋಪಿತನ ಹಾಗೂ ಅಭಿಯೋಜಕರ ಪರ ವಾದ ಪ್ರತಿವಾದಗಳನ್ನು ಆಲಿಸಲಾಯಿತು.

7. ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುತ್ತದೆ.

> 1. ದಿನಾಂಕ 11-6-2022 ರಂದು ಸಂಜೆ 5 ಗಂಟೆ ಸಮಯದಲ್ಲಿ ಗುಡಿಬಂಡೆ ತಾಲ್ಲೂಕು ಬೀಚಗಾನಹಳ್ಳಿ ಗ್ರಾಮದ ಚಾಸಾ 1 ರವರ ಬಾಬತ್ತು ಟೊಮ್ಯಾಟೋ ತೋಟದಲ್ಲಿ ಆರೋಪಿ ಚಾಸಾ 1 ರವರನ್ನು ಕೂಲಿ ಹಣವನ್ನು ಕೇಳಿದ್ದು, ಚಾಸಾ 1 ರವರು ಐದು ನಿಮಿಷ ಕೊಡುತ್ತೇನೆಂದು ಹೇಳಿದ್ದಕ್ಕೆ ಆರೋಪಿ ಕಬ್ಬಿಣದ ಪೈಪಿನಿಂದ ಚಾಸಾ 1 ರವರ ಬೆನ್ನಿಗೆ ಹೊಡೆದು, ಬಿಡಿಸಲು ಅಡ್ಡ ಬಂದ ಚಾಸಾ 2 ರವರಿಗೆ ಕೋಲಿನಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡುವ ಮೂಲಕ ಭಾರತ ದಂಡ ಸಂಹಿತೆ ಕಲಂ 324 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾನೆ ಎಂಬುದನ್ನು ಅಭಿಯೋಜನೆಯು

ನಿಸ್ಸಂಶಯವಾಗಿ ಸಾಬೀತುಪಡಿಸುವುದೇ?

2. ಯಾವ ಆದೇಶ?

8. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಕಂಡಂತೆ ಇರುತ್ತವೆ.

ಅಂಶ 1 - ನಕಾರಾತ್ಮಕವಾಗಿ

ಅಂಶ 2 - ಅಂತಿಮ ಆದೇಶದಂತೆ

## ಕಾರಣಗಳು

**9.** ಅಂಶ **1 -** ಅಭಿಯೋಜನೆಯವರು ಆರೋಪಿತನ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 324 ರಡಿ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ. ಸದರಿ ಅಂಶಗಳನ್ನು ಸಾಬೀತುಪಡಿಸುವ ಸಲುವಾಗಿ ಒಟ್ಟು 6 ಸಾಕ್ಷಿದಾರರನ್ನು ದೋಷಾರೋಪಣಾ ಪಟ್ಟಿಯಲ್ಲಿ ತೋರಿಸಿದ್ದು, ಅವರಲ್ಲಿ ಚಾಸಾ 1 ಮತ್ತು 2 ರವರನ್ನು ಫ್ರಾಸಾ-1 ಮತ್ತು 2 ಎಂದು ಅಭಿಯೋಜಕರ ಪರವಾಗಿ ವಿಚಾರಣೆಗೆ ಒಳಪಡಿಸಲಾಗಿದೆ ಹಾಗೂ ನಿಪಿ-1 ರಿಂದ 4 ನ್ನು ಗುರುತಿಸಿಕೊಂಡಿರುತ್ತಾರೆ.

10. ಚಾಸಾ 1 / ಫ್ರಾಸಾ 1 ಪ್ರಕರಣದಲ್ಲಿ ನೊಂದ ವ್ಯಕ್ತಿ ಹಾಗೂ ಪಿರ್ಯಾದಿಯಾಗಿದ್ದು, ತನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿ ತನಗೆ ಮತ್ತು ಚಾಸಾ 2 ರವರಿಗೆ ಹಲ್ಲೆ ಮಾಡಿರುವುದಿಲ್ಲ, ತಾನು ತೋಟದಲ್ಲಿ ಕೆಲಸ ಮಾಡುತ್ತಿರುವಾಗ ಬಿದ್ದು ಗಾಯಪಡಿಸಿಕೊಂಡು ಚಿಕಿತ್ಸೆ ಪಡೆಯುವಾಗ ಪೋಲೀಸರು ಎರಡು ದಾಖಲೆಗಳಿಗೆ ತನ್ನ ಸಹಿಗಳನ್ನು ಪಡೆದಿರುತ್ತಾರೆ ಮತ್ತು ಸದರಿ ದಾಖಲೆಗಳಲ್ಲಿ ಏನು ಬರೆದಿರುತ್ತಾರೆಂದು ತನಗೆ ಗೊತ್ತಿಲ್ಲ, ತಾನು ಪೋಲೀಸರಿಗೆ ಯಾವುದೇ ಸ್ಥಳವನ್ನು ತೋರಿಸಿರುವುದಿಲ್ಲ ಹಾಗೂ ತನ್ನ ಸಮಕ್ಷಮ ಪೋಲೀಸರು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ, ತಾನು ಈ ಪ್ರಕರಣದ ಸಂಬಂಧ ಪೋಲೀಸರ ಮುಂದೆ ಯಾವುದೇ ಹೇಳಿಕೆ ಹಾಗೂ ಮರು ಹೇಳಿಕೆ ನೀಡಿರುವುದಿಲ್ಲವೆಂದು ನುಡಿದಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರು ಫ್ರಾಸಾ-1 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿದ್ದು, ಪಾಟೀ ಸವಾಲಿನಲ್ಲಿ ನಿಪಿ 1 ರ ದೂರಿನ ಅಂಶಗಳನ್ನು, ನಿಪಿ 2 ರ ಮಹಜರಿನ ಅಂಶಗಳನ್ನು

ಹಾಗೂ ನಿಪಿ 3 ರಂತೆ ರಂತೆ ಪೋಲೀಸರ ಮುಂದೆ ನಿಪಿ 3 ರಂತೆ ನೀಡಿದ್ದರೆನ್ನಲಾದ ಹೇಳಿಕೆಯ ಅಂಶಗಳನ್ನು ಅಲ್ಲಗೆಳೆದಿರುತ್ತಾರೆ. ಹಾಗಾಗಿ ಪ್ರಾಸಾ 1 ರವರ ಸಾಕ್ಷ್ಯವು ಅಭಿಯೋಜನೆಗೆ ಸಹಾಯಕವಾಗುವುದಿಲ್ಲ.

11. ಚಾಸಾ 2 / ಪ್ರಾಸಾ 2 ಶ್ರೀಕಾಂತ್ ಪ್ರಕರಣದಲ್ಲಿ ಗಾಯಾಳುವಾಗಿದ್ದು, ತನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿ ತನಗೆ ಮತ್ತು ಚಾಸಾ 1 ರವರಿಗೆ ಹಲ್ಲೆ ಮಾಡಿರುವುದಿಲ್ಲ, ತಾನು ತೋಟದಲ್ಲಿ ಕೆಲಸ ಮಾಡುತ್ತಿರುವಾಗ ಬಿದ್ದು ಗಾಯಪಡಿಸಿಕೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ, ತಾನು ಈ ಪ್ರಕರಣದ ಸಂಬಂಧ ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲವೆಂದು ನುಡಿದಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ-2 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿದ್ದು, ಪಾಟೀ ಸವಾಲಿನಲ್ಲಿ ನಿಪಿ 4 ರಂತೆ ನೀಡಿದ್ದರೆನ್ನಲಾದ ಹೇಳಿಕೆಯ ಅಂಶಗಳನ್ನು ಅಲ್ಲಗೆಳೆದಿರುತ್ತಾರೆ. ಹಾಗಾಗಿ ಪ್ರಾಸಾ 2 ರವರ ಸಾಕ್ಷ್ಯವು ಅಭಿಯೋಜನೆಗೆ ಸಹಾಯಕವಾಗುವುದಿಲ್ಲ

12. ಮೇಲ್ಕಾಣಿಸಿದ ಸಾಕ್ಷ್ಯಾದಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಪ್ರಾಸಾ 1 ಮತ್ತು 2 ರವರು ಪಿರ್ಯಾದುದಾರರು ಹಾಗೂ ಗಾಯಾಳುಗಳಾಗಿ ಅಭಿಯೋಜನೆಗೆ ಪೂರಕವಾದ ಸಾಕ್ಷ್ಯವನ್ನು ನುಡಿಯದೇ ವ್ಯತಿರಿಕ್ತವಾದ ಸಾಕ್ಷ್ಯ ನುಡಿದಿರುತ್ತಾರೆ. ಪ್ರಾಸಾ 1 ಮತ್ತು 2 ರವರು ಅಭಿಯೋಜನಾ ಪ್ರಕರಣಕ್ಕೆ ವ್ಯತಿರಿಕ್ತವಾದ ಸಾಕ್ಷ್ಯ ನುಡಿದ ಕಾರಣ ಇತರೆ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸುವುದರಿಂದ ಅಭಿಯೋಜನೆಗೆ ಯಾವುದೇ ರೀತಿಯ ಸಹಾಯವಾಗುವುದಿಲ್ಲವೆಂದು ತಿಳಿದು ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆಯನ್ನು ತಿರಸ್ಕರಿಸಿ ಉಳಿದ ಸಾಕ್ಷಿದಾರರ ವಿಚಾರಣೆಯನ್ನು ಕೈಬಿಡಲಾಗಿರುತ್ತದೆ. ಆದ್ದರಿಂದ ಅಭಿಯೋಜನೆಯು ಆರೋಪಿತನ ವಿರುದ್ಧ ಆಪಾದಿಸಿರುವಂತಹ ಆರೋಪಗಳನ್ನು ಪ್ರಬಲವಾದ ಹಾಗೂ ನಂಬಲರ್ಹವಾದ ಸಾಕ್ಷ್ಯಾಧಾರಗಳೊಂದಿಗೆ ಸಂಶಯಾತೀತವಾಗಿ ರುಜುವಾತು ಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುವುದರಿಂದ ಸದರಿ ಸಂಶಯದ ಲಾಭವನ್ನು ಪಡೆದು ಆರೋಪಿ ಬಿಡುಗಡೆ ಹೊಂದಲು ಅರ್ಹನಿರುತ್ತಾನೆಂದು ಅಭಿಪ್ರಾಯಪಟ್ಟು ಮೇಲ್ಕಾಣಿಸಿದ ಅಂಶ 1 ಕ್ಕೆ ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

13. ಅಂಶ **2**– ಮೇಲ್ಕಂಡ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶ ಮಾಡುತ್ತೇನೆ.

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತನನ್ನು ಭಾರತೀಯ ದಂಡ ಸಂಹಿತೆ ಕಲಂ 324 ರಡಿಯಲ್ಲಿನ ಆರೋಪಗಳಿಂದ ದೋಷಮುಕ್ತ ಗೊಳಿಸಲಾಗಿದೆ.

ಆರೋಪಿತನ ವೈಯುಕ್ತಿಕ ಬಾಂಡ್ ಹಾಗೂ ಜಾಮೀನು ಬಾಂಡ್‌ಗಳನ್ನು ಈ ಆದೇಶವಾದ ದಿನದಿಂದ ರದ್ದುಗೊಳಿಸಲಾಗಿದೆ.

ಆರೋಪಿ ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರಡಿಯಲ್ಲಿ ಸಲ್ಲಿಸಿದ ವೈಯುಕ್ತಿಕ ಬಾಂಡ್ ಹಾಗೂ ಜಾಮೀನು ಬಾಂಡ್ ಈ ಆದೇಶವಾದ ದಿನದಿಂದ ಆರು ತಿಂಗಳುವರಗೆ ಊರ್ಜಿತವಾಗಿರುತ್ತದೆ.

ಪಿ.ಎಫ್.ಸಂಖ್ಯೆ 112/2022 ರಲ್ಲಿ ಅಮಾನತ್ತುಪಡಿಸಿಕೊಂಡಿರುವ ಎರಡೂವರೆ ಅಡಿ ಉದ್ದದ ಕೋಲು ಬೆಲೆ ಬಾಳದ ವಸ್ತುವಾದ್ದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸತಕ್ಕದ್ದು ಹಾಗೂ 2 ಅಡಿ ಉದ್ದದ ಕಬ್ಬಿಣದ ಪೈಪು ಬೆಲೆ ಬಾಳುವ ವಸ್ತುವಾದ್ದರಿಂದ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದೆಂದು ಈ ಮೂಲಕ ಕಛೇರಿಗೆ ಆದೇಶಿಸಲಾಗಿದೆ.

(ಶೀಘ್ರಲಿಪಿಗಾರ್ತಿಗೆ ಗಣಕ ಯಂತ್ರದ ಮೂಲಕ ನೇರ ಉಕ್ತಲೇಖನ ನೀಡಿದ ನಂತರ ತಿದ್ದುಪಡಿ ಮಾಡಿ ದಿನಾಂಕ 01-06-2024 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

**(ಹರೀಶ ಕೆ ಎಂ.)**
**ಜೆ ಎಂ ಎಫ್ ಸಿ., ಗುಡಿಬಂಡೆ**

ಅನುಬಂಧ

ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿದಾರರ ಪಟ್ಟಿ

ಪ್ರಾಸಾ 1 – ವೆಂಕಟರವಣಪ್ಪ

ಫ್ರಾಸಾ 2 - ಶ್ರೀಕಾಂತ್

ಅಭಿಯೋಜನೆ ಪರ ದಾಖಲು ಮಾಡಿದ ನಿಶಾನೆಗಳ ಪಟ್ಟಿ

ನಿಪಿ 1 - ದೂರು
ನಿಪಿ 2 - ಮಹಜರು
ನಿಪಿ 3 - ಫ್ರಾಸಾ 1 ರವರ ಮರುಹೇಳಿಕೆ
ನಿಪಿ 4 - ಫ್ರಾಸಾ 2 ರವರ ಹೇಳಿಕೆ

ಅಭಿಯೋಜನೆ ಪರ ದಾಖಲು ಮಾಡಿದ ಮುದ್ದೆಮಾಲುಗಳ ಪಟ್ಟಿ
- ಇಲ್ಲಾ -

ಆರೋಪಿತನ ಪರ ವಿಚಾರಣೆಯಾದ ಸಾಕ್ಷಿಗಳ ಪಟ್ಟಿ
- ಇಲ್ಲಾ -

ಆರೋಪಿತನ ಪರ ಹಾಜರುಪಡಿಸಿದ ದಾಖಲೆಗಳ ಪಟ್ಟಿ
- ಇಲ್ಲಾ -

**(ಹರೀಶ ಕೆ ಎಂ. )**
**ಜೆ ಎಂ ಎಫ್ ಸಿ., ಗುಡಿಬಂಡೆ**

**(ತೀರ್ಪನ್ನು ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 01-06-2024 ರಂದು ಘೋಷಿಸಲಾಯಿತು. ಆದೇಶ ಪ್ರತ್ಯೇಕ ಹಾಳೆಗಳಲ್ಲಿ)**

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತನನ್ನು ಭಾರತೀಯ ದಂಡ ಸಂಹಿತೆ ಕಲಂ 324 ರಡಿಯಲ್ಲಿನ ಆರೋಪಗಳಿಂದ ದೋಷಮುಕ್ತ ಗೊಳಿಸಲಾಗಿದೆ.

ಆರೋಪಿತನ ವೈಯುಕ್ತಿಕ ಬಾಂಡ್ ಹಾಗೂ ಜಾಮೀನು ಬಾಂಡ್‌ಗಳನ್ನು ಈ ಆದೇಶವಾದ ದಿನದಿಂದ ರದ್ದುಗೊಳಿಸಲಾಗಿದೆ.

ಆರೋಪಿ ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರಡಿಯಲ್ಲಿ ಸಲ್ಲಿಸಿದ ವೈಯುಕ್ತಿಕ ಬಾಂಡ್ ಹಾಗೂ ಜಾಮೀನು ಬಾಂಡ್ ಈ ಆದೇಶವಾದ ದಿನದಿಂದ ಆರು ತಿಂಗಳುವರಗೆ ಊರ್ಜಿತವಾಗಿರುತ್ತದೆ.

ಪಿ.ಎಫ್.ಸಂಖ್ಯೆ 112/2022 ರಲ್ಲಿ

ಅಮಾನತ್ತುಪಡಿಸಿಕೊಂಡಿರುವ ಎರಡೂವರೆ ಅಡಿ ಉದ್ದದ ಕೋಲು ಬೆಲೆ ಬಾಳದ ವಸ್ತುವಾದ್ದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸತಕ್ಕದ್ದು ಹಾಗೂ 2 ಅಡಿ ಉದ್ದದ ಕಬ್ಬಿಣದ ಪೈಪು ಬೆಲೆ ಬಾಳುವ ವಸ್ತುವಾದ್ದರಿಂದ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದೆಂದು ಈ ಮೂಲಕ ಕಛೇರಿಗೆ ಆದೇಶಿಸಲಾಗಿದೆ.

**(ಹರೀಶ ಕೆ ಎಂ. )**
ಜೆ ಎಂ ಎಫ್ ಸಿ., ಗುಡಿಬಂಡೆ